ಇದ್ದ. ಒಂದು ಸರ್ತಿ ವಿವೇಕ ಖುಷಿಯಿಂದ, 'ರಾಯರು ದಿನದಿಂದ ದಿನಕ್ಕೆ ಗಟ್ಟಿಯಾಗ್ತಾ ಇದ್ದಾರೆ' ಅಂತ ಹೇಳಿದ್ದ. 'ಹೌದಾ... ಹಾಗಾದ್ರೆ ಮುದುಕ ಬೇಗ ಸಾಯುವ ನಮೂನಿ ಕಾಣೂದಿಲ್ವಾ!?' ಅಂತ ಆ ಕಡೆಯಿಂದ ಮಗ ಕೇಳಿದ್ದ. ಗ್ರಾಚಾರಕ್ಕೆ ವಿವೇಕ ಸ್ಪೀಕರ್ ಹಾಕಿಕೊಂಡಿದ್ದ, ಹತ್ತಿರದಲ್ಲೇ ಇದ್ದ ರಾಯರಿಗೆ ಅದು ಕೇಳಿತು. ವಿವೇಕ ಇರಿಸು ಮುರಿಸಿನಿಂದ ಅಲ್ಲಿಂದ ಎದ್ದು ಹೋಗಿದ್ದ.

ಹೀಗೆಯೇ ಹದಿನೈದು ದಿನ ಹೋಯಿತು. ರಾಯರು ಅಂಗಳದಲ್ಲಿ ಓಡಾಡುವಷ್ಟು ಗಟ್ಟಿಯಾದರು. ಒಂದು ದಿನ ಸಂಜೆ, 'ವಿವೇಕಾ... ನಿನ್ನ ಹೆಂಡತಿ ಎರಡನೆಯ ಹೆರಿಗೆಗೆ ಹೋದವಳು ಬಂದಳೇನೋ?' ಅಂತ ಕೇಳಿದರು. 'ಹೌದು ಅವಳು ಬಂದು ಆಗಲೇ ಒಂದು ವಾರ ಆಯಿತು' ಅಂದ.

'ಮಗುವಿಗೆ ಈಗ ಎಷ್ಟು ತಿಂಗಳು?'

'ಐದು ತುಂಬಿ ಆರು ನಡೀತಾ ಉಂಟು.'

'ದೊಡ್ಡವ ಮಗ ಅಲ್ವಾ? ಎಷ್ಟಾಯಿತು ಪ್ರಾಯ ಅವನಿಗೆ?'

'ಅವನಿಗೆ ಈಗ ಮೂರೂವರೆ. ಎಂತಕ್ಕೆ ಕೇಳ್ತಾ ಇದ್ದೀರಿ?'

'ಎಂತಕ್ಕೂ ಇಲ್ಲ. ನಾನು ನೋಡ್ಲೇ ಇಲ್ಲ. ನಾಳೆ ಸಂಜೆ ಒಮ್ಮೆ ಕರ್ಕೊಂಡು ಬರ್ತೀಯಾ?'

'ಆಯ್ತು ರಾಯರೇ.'

ಮರುದಿವಸ ಸಂಜೆ ವಿವೇಕ ಹೆಂಡತಿ ಮಕ್ಕಳನ್ನು ಕರ್ಕೊಂಡು ಬಂದಿದ್ದ. ಜೊತೆಗೆ ಗಣಪಯ್ಯ ಮಾಷ್ಟ್ರು ಬಂದಿದ್ದರು... 'ರಾಯರೇ ನೀವೇ ಬೆಳಗಿಸಿದ ನನ್ನ ಮನೆಯ ದೀಪ' ಅಂತ ಹೇಳಿ ಮೊಮ್ಮಕ್ಕಳನ್ನು ತೋರಿಸಿದರು. ರಾಯರು ಸುಮ್ಮನೆ ನಕ್ಕರು. ಬಾಯಿ ಬಚ್ಚುವಷ್ಟು ಮಾತಾಡಿದರು. ಕಡೆಗೆ ಹೆಂಡತಿಯ ಹತ್ತಿರ, 'ಚಪ್ಪೆಯಾಗಿದೆ ಬಾಯಿ ಎಲೆ ಅಡಿಕೆ ತೆಕ್ಕೊಂಡು ಬಾ' ಅಂದರು. ಎಲೆ ತೆಗೆದು ಸುಣ್ಣ ಹಚ್ಚಿ, ಬಾಯಿಗೆ ಅಡಿಕೆ ಹೋಳು ಹಾಕಿಕೊಂಡು ಎಲೆಯನ್ನು ಇನ್ನೇನು ಮಡಚಿ ಬಾಯಿಗೆ ಹಾಕಿಕೊಳ್ಬೇಕು ಎನ್ನುವಾಗ ವಿವೇಕನ ಮಗ, 'ಅಜ್ಜಾ ನಾನು ಹಾಕ್ತೇನೆ' ಅಂತ ಛಂಗನೆ ಓಡಿ ಬಂದ. ವಿವೇಕ, ಗಣಪಯ್ಯ ಮಾಷ್ಟ್ರು ಎಲ್ಲರೂ, 'ಏಯ್! ಹಾಗೆಲ್ಲ ಹೇಳ್ಬಾರ್ದು' ಅಂತ ಅವನನ್ನು ತಡೀಲಿಕ್ಕೆ ನೋಡಿದ್ರು. 'ಇರ್ಲಿ ಇರ್ಲಿ ಮಗುವನ್ನು



ತಡೀಬೇಡಿ' ಅಂತ ಹೇಳಿ ಮಗುವಿನ ಕೈಗೆ ಮಡಚಿದ ಎಲೆ ಕೊಟ್ಟರು. ಮಗು ಬಾಯಿಗೆ ಹಾಕಿದಾಗ ನಿಧಾನಕ್ಕೆ ಬಾಯಿ ಆಡಿಸುತ್ತ, 'ಆಹಾ... ಇದು ಸುಖ ಅಂದ್ರೆ' ಅಂತ ಕಣ್ಣುಮುಚ್ಚಿಕೊಂಡು ಹೇಳಿದರು. ಒಂದಷ್ಟು ಹೊತ್ತು ಸುಮ್ಮನೇ ಕಣ್ಣು ಮುಚ್ಚಿ ಇದ್ದವರು ಸಣ್ಣ ಮಗು ಕುಸು ಕುಸು ಅಂತ ಹೇಳಿದಾಗ ಕಣ್ಣು ಬಿಟ್ಟರು. 'ಎಲ್ಲಿ ಆ ಮಗುವನ್ನು ಕೊಡು' ಅಂದರು. ವಿವೇಕನ ಹೆಂಡತಿ ಕೊಟ್ಟಳು. ಮಗುವನ್ನು ತೊಡೆಯ ಮೇಲೆ ಮೇಲೆ ಮಲಗಿಸಿಕೊಂಡರು. 'ಆಹಾ ಸಾಕ್ಷಾತ್ ಲಕ್ಷ್ಮಿ' ಎಂದರು. ಹೆಂಡತಿಗೆ ಸನ್ನೆ ಮಾಡಿದರು. ಅವರು ಒಳಗೆ ಹೋಗಿ ಕಾಸಿನ ಸರ ತಂದರು. ರಾಯರು ಅದನ್ನು ಮಗುವಿನ ಕುತ್ತಿಗೆಗೆ ಹಾಕಿದರು. 'ರಾಯರೇ!?... ಇದು ಎಂಥದು ನೀವು ಮಾಡಿದ್ದು!?' ಎಲ್ಲರೂ ಗಾಬರಿಯಿಂದ ಕೇಳಿದರು. 'ಯಾಕೆ? ಏನು? ಎಂಥದು ಅಂತ ಯಾರು ಸಾ ಕೇಳ್ಳಿಕ್ಕೆ ಇಲ್ಲ. ಇದು ನನ್ನ ಇಷ್ಟ, ಅಷ್ಟೇ' ಅಂದರು. ಮಗು ಕಾಲಿಂದ ರಪರಪನೆ ರಾಯರ ಎದೆಗೆ ತುಳಿಯಿತು. 'ಆಹಾ ಇದನ್ನೇ ಬಯಸಿದ್ದೆ. ಆಹಾ ಆಹಾ' ಎನುತ್ತಲೇ ರಾಯರು ಕಣ್ಣು ಮುಚ್ಚಿದರು. ತುಂಬ ಹೊತ್ತಾದ್ರೂ ಮಿಸುಕಾಡದ ಅವರ ಹತ್ತಿರ ಹೋಗಿ ಕೈ ಹಿಡಿದ ಗಣಪಯ್ಯ ಮಾಷ್ಟ್ರು ಕಣ್ಣಲ್ಲಿ ನೀರು ತುಂಬಿಕೊಂಡು, 'ನನ್ನ ಮನೆಯನ್ನು ಬೆಳಗಿಸಿದ ದೀಪ ನಂದಿತು' ಅಂದರು.

●